ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ**,** ಹೊಸದುರ್ಗ**.**

ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ**1249/2019**

ಪಿ**.**ಡಬ್ಲ್ಯೂ**-1**
ಸಿ**.**ಡಬ್ಲ್ಯೂ**-1**

ಸಾಕ್ಷಿಗೆ ದಿನಾಂಕ **02-04-2026** ರಂದು ಪ್ರಮಾಣ ವಚನ ಬೋಧಿಸಲಾಯಿತು**.**

| | |
|---|---|
| ಸಾಕ್ಷಿಯ ಹೆಸರು | ಃ ಲೊಕೇಶಪ್ಪ |
| ತಂದೆಯ ಹೆಸರು | ಃ ಪುಟ್ಟಪ್ಪ |
| ವಯಸ್ಸು | ಃ 50 ವರ್ಷ |
| ಉದ್ಯೋಗ | ಃ ಗಾರೆ ಕೆಲಸ |
| ವಾಸಸ್ಥಳ | ಃ ಕೊಂಡಾಪುರ ಗ್ರಾಮ |

<u>ಮುಖ್ಯವಿಚಾರಣೆ ಮಾನ್ಯ ಸ.ಸ.ಅ ರವರಿಂದ</u>

ನ್ಯಾಯಾಲಯದ ಮುಂದೆ ಹಾಜರಿರುವ 1 ನೇ ಆರೋಪಿ ನನ್ನ ಅಣ್ಣ, 2 ನೇ ಆರೋಪಿ ನನ್ನ ಅತ್ತಿಗೆ . 3 ನೇ ಆರೋಪಿ ನನ್ನ ಅಕ್ಕ. 5 ನೇ ಆರೋಪಿ ನನ್ನ ತಮ್ಮ. ಗೈರು ಹಾಜರಿರುವ 4 ನೇ ಆರೋಪಿ ನನ್ನ ಅಳಿಯ. ಚಾಸಾ -6 ನನ್ನ ಹೆಂಡತಿ. ಚಾಸಾ 7 ರಿಂದ 10 ರವರ ಪರಿಚಯವಿರುತ್ತದೆ.

ನನ್ನ ಮತ್ತು ಆರೋಪಿತರ ನಡುವೆ ಯಾವುದೇ ಜಗಳ ನಡೆದಿಲ್ಲ. ಆರೋಪಿತರು ನನ್ನನ್ನು ಅಡ್ಡಗಟ್ಟಿ ಪ್ರತಿಬಂಧ ಉಂಟುಮಾಡಿರುವುದಿಲ್ಲ. ನನ್ನ ಮೇಲೆ ಯಾವುದೇ ಮಾರಣಾಂತಿಕ ಹಲ್ಲೆ ಮಾಡಿರುವುದಿಲ್ಲ . ಅವಾಚ್ಯ ಶಬ್ದಗಳಿಂದ ನಿಂದಿಸಿಲ್ಲ ಮತ್ತು ಪ್ರಾಣ ಬೆದರಿಕೆ ಹಾಕಿಲ್ಲ. ನಾನು ಯಾವುದೇ ಚಿಕಿತ್ಸೆ ಪಡೆದಿರುವುದಿಲ್ಲ. 5 ನೇ ಆರೋಪಿ 1 ರಿಂದ 4 ನೇ ಆರೋಪಿಗಳಿಗೆ ಯಾವುದೇ ಕುಮ್ಮಕ್ಕು ನೀಡಿರುವುದಿಲ್ಲ. ಘಟನೆಗೆ ಸಂಬಂಧಿಸಿದಂತೆ ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

ಸಾಕ್ಷಿಯು ಹೇಳಿಕೆ ಮತ್ತು ಅದರಲ್ಲಿರುವ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿದ್ದು, ಹೇಳಿಕೆಯನ್ನು ನಿಪಿ-01 ಎಂದು ಮತ್ತು ಸಾಕ್ಷಿಯ ಹೆಬ್ಬೆಟ್ಟಿನ ಗುರುತನ್ನು ನಿಪಿ-01(ಎ) ಎಂದು ಗುರುತಿಸಲಾಯಿತು.

ನಿಪಿ-1 ರಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮಚ್ಚು ಮತ್ತು ಕೊಡಲಿಯನ್ನು ನೋಡಿ ಗುರುತಿಸಿರುವುದಿಲ್ಲ.

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು ಸಕಾರಣಗಳನ್ನು ಮನಗಂಡು ಅನುಮತಿ ನೀಡಲಾಯಿತು)

ಪಾಟೀ ಸವಾಲು ಮಾನ್ಯ ಸ.ಸ.ಅ.ರವರಿಂದ

ದಿಃ 04.06.2019 ರಂದು ರಾತ್ರಿ 8.00 ಗಂಟೆ ಸಮಯದಲ್ಲಿ ನಾನು ತೋಟಕ್ಕೆ ಹೋಗಿ ಮನೆಗೆ ವಾಪಸ್ ಬರುವಾಗ 1 ನೇ ಆರೋಪಿಯ ಮನೆಯ ಹತ್ತಿರ ಬಂದಾಗ 1 ರಿಂದ 4 ನೇ ಆರೋಪಿಗಳು ನನ್ನನ್ನು ತಡೆದು ನಿಲ್ಲಿಸಿ ಪ್ರತಿಬಂಧ ಉಂಟುಮಾಡಿರುತ್ತಾರೆ ಎಂದರೆ ಸರಿಯಲ್ಲ . ನನಗೆ ಅವಾಚ್ಯ ಶಬ್ದಗಳಿಂದ ಬಾಯಿಗೆ ಬಂದಂತೆ ಬೈದರು ಎಂದರೆ ಸರಿಯಲ್ಲ . 2 ನೇ ಆರೋಪಿ ಅಲ್ಲೇ ಇದ್ದ ಮಚ್ಚನ್ನು ತೆಗೆದುಕೊಂಡು ನನ್ನ ಎಡ ತೊಡೆಗೆ ಹೊಡೆದು ರಕ್ತಗಾಯಪಡಿಸಿದರು ಎಂದರೆ ಸರಿಯಲ್ಲ . 1 ನೇ ಆರೋಪಿ ಅಲ್ಲೇ ಇದ್ದ ಕೊಡಲಿಯಿಂದ ನನ್ನ ತಲೆಗೆ ಹೊಡೆದು ರಕ್ತಗಾಯಪಡಿಸಿದರು ಎಂದರೆ ಸರಿಯಲ್ಲ . 3 ಮತ್ತು 4 ನೇ ಆರೋಪಿ ನನ್ನನ್ನು ಹಿಡಿದುಕೊಂಡು ಕೈ ಕಾಲುಗಳಿಂದ ನನ್ನ ಮೈ ಕೈಗೆ ಹೊಡೆದು ನೋವುಂಟುಮಾಡಿದರು ಎಂದರೆ ಸರಿಯಲ್ಲ . ನನ್ನ ಚಿರಾಟ ಕೇಳಿ ನನ್ನ ಬಿಡಿಸಿಕೊಳ್ಳಲು ಬಂದ ಚಾಸಾ 6 ರವರಿಗೂ ಆರೋಪಿಗಳು ಬೈದರು ಎಂದರೆ ಸರಿಯಲ್ಲ . ಚಾಸಾ 6 ರವರಿಗೂ ಆರೋಪಿಗಳು ಕೈ ಕಾಲುಗಳಿಂದ ಹೊಡೆದರು ಎಂದರೆ ಸರಿಯಲ್ಲ . ನಮ್ಮ ಮೇಲೆ ಹಲ್ಲೆ ಮಾಡಲು 5 ನೇ ಆರೋಪಿಯ ಕುಮ್ಮಕ್ಕು ಇರುತ್ತದೆ ಎಂದರೆ ಸರಿಯಲ್ಲ . ನಂತರ ಚಾಸಾ 8 ಮತ್ತು 9 ರವರು ನನ್ನನ್ನು ಅಂಬ್ಯುಲೆನ್ಸ್ ನಲ್ಲಿ ಹೊಸದುರ್ಗ ಆಸ್ಪತ್ರೆಗೆ ದಾಖಲಿಸಿ ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ . ಈ ಕುರಿತು ದಿಃ 06.06.2019 ಪೊಲೀಸರು ಆಸ್ಪತ್ರೆಗೆ ಬಂದು ನನ್ನ ಹೇಳಿಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ .

ದಿಃ 06.06.2019 ರಂದು ನಾನು ಪೊಲೀಸರಿಗೆ ನನ್ನನ್ನು ಕೊಲ್ಲುವ ಉದ್ದೇಶ ಆರೋಪಿಗಳಿಗೆ ಇರಲಿಲ್ಲ ಎಂದು ನನ್ನ ಮುಂದುವರೆದ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ . ಸಾಕ್ಷಿ ಸದರಿ ಹೇಳಿಕೆಯನ್ನು ನಿರಾಕರಿಸಿದ ಕಾರಣ ಅದನ್ನು ನಿಪಿ-2 ಎಂದು ಗುರುತಿಸಲಾಯಿತು.

ಆರೋಪಿತರು ನಮ್ಮ ಸಂಬಂಧಿಕರು ಎಂದರೆ ಸರಿ. ಆರೋಪಿತರು ನನ್ನ ವಿರುದ್ಧ ಸಿ.ಸಿ. ನಂಬರ್ 1248/2019 ರಂತೆ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಆರೋಪಿತರೊಂದಿಗೆ ರಾಜೀಯಾಗಿದ್ದೇನೆಂದರೆ ಸರಿ. ರಾಜಿಯಾಗಿರುವ

ಕಾರಣ ನಿಪಿ-1 ರಂತೆ ಹೇಳಿಕೆ ನೀಡಿ, ನಿಪಿ-2 ರಂತೆ ಮುಂದುವರೆದ ಹೇಳಿಕೆ ನೀಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿಗಳ ಪರ ಶ್ರೀ ಕೆ . ಎಂ. ವಕೀಲರಿಂದ

ಆರೋಪಿ ಪರ ವಕೀಲರು ತಮ್ಮ ಪರ ಪಾಟೀ ಸವಾಲು ಏನೂ ಇಲ್ಲ ಎಂದು ಸಲ್ಲಿಸುತ್ತಾರೆ.

ಮರುವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ.ಹೇ.ಕೆ.ಸರಿ ಇದೆ.

(ಪ್ರಸನ್ನಕುಮಾರ್ ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಹೊಸದುರ್ಗ.